ನಾನು ಅವುಗಳಲ್ಲಿಲ್ಲ ; ಅವು ನನ್ನೊಳಗಿವೆ'

* * *

ಬರೆದ ಹಾಳೆಗಳನ್ನು ತಾತನ ಬ್ಯಾಗಿನಲ್ಲಿ ಹಾಕಿದೆ. ಸಂತರು ಭಾಷಣವನ್ನು ಕನ್ನಡದಲ್ಲೇ ಮಾಡಿದ್ದು ಆಶ್ಚರ್ಯ. ಮಧ್ಯೆ ಮಧ್ಯೆ ಹಿಂದಿಯಲ್ಲಿ ಇಂಗ್ಲಿಷ್‌ನಲ್ಲಿ ಅರ್ಥ ಹೇಳಿದರು. ಅಲ್ಲೇ ನೆಲಸಿರುವ ಶೃಂಗೇರಿ ಮಠದ ಚಿಕ್ಕ ಸ್ವಾಮಿ ಅವರು ಎಂದು ತಿಳಿದು ತಾತನಿಗೆ ಮರುದಿನ ಆ ವಿಷಯ ಹೇಳಿದೆ. ತಾತ ಅವರು ಹೇಳಿದಂತೆ 'ರಹಸ್ಯವಂತ ಮೌನ' ದಲ್ಲಿ ಇದ್ದಂತಿತ್ತು. ರಾತ್ರಿ ಊಟ ಬೇಡ, ಈ ಭಾಗವತದ ಪ್ರವಚನವೇ ಸಾಕಾಯ್ತು ಎನ್ನುತ್ತಾ ಮಲಗಿದರು.

ಆಶ್ರಮದ ಮೇಲ್ವಿಚಾರಕರು ಮಿತಭಾಷಿ. 'ಆ ಕೋಣೆ ನಾಳೆ ಖಾಲಿ ಆಗುತ್ತದೆ. ಹದಿನೈದು ದಿನದ ಗಡುವು ನಿನ್ನೆ ಮುಗಿದಿದೆ. ಅಲ್ಲಿ ಗಾಳಿ ಬೆಳಕು ದೃಶ್ಯ ಎಲ್ಲಾ ಚೆನ್ನಾಗಿದೆ. ಬೇಕಿದ್ದರೆ ನಿಮ್ಮ ತಾತನನ್ನು ಅಲ್ಲಿಗೆ ವರ್ಗಾಯಿಸಬಹುದು' ಎಂದರು. 'ಗಡುವು' ಎನ್ನುವ ಪದ ಅರ್ಥವಾಗದೆ ಸುಮ್ಮನೆ ಹೋಗಿ ಮಲಗಿದೆ. 'ನಾನು ಅವುಗಳಲ್ಲಿಲ್ಲ, ಅವು ನನ್ನೊಳಗಿವೆ' ಎಂದು ಪ್ರವಚನದಲ್ಲಿ ಅವರು ಹೇಳಿದ ಮಾತಿನ ಅರ್ಥವನ್ನು ಜಿಜ್ಞಾಸೆ ಮಾಡುತ್ತಾ, ತಾತ ಕೊಟ್ಟ ಹಣವೆಲ್ಲಾ ನನ್ನೊಳಗಿದೆ ಎನ್ನಲು ಸಾಧ್ಯವಿಲ್ಲ, ನಾನೇ ಅದರಲ್ಲಿ ಹುದುಗಿಬಿಟ್ಟದೇನೆ ಎನಿಸಿ, ತರ್ಕವನ್ನು ತಳ್ಳಿಹಾಕಿದೆ. ತಾತ ನಿಶ್ಚಿಂತೆಯಿಂದ ಒಮ್ಮೆಯೂ ಏಳದೆ ಬೆಳಗಾಗುವ ತನಕ ಮಿಸುಕಾಡಲ್ಲ.

ಬೆಳಿಗ್ಗೆ ಒಂದಿಷ್ಟು ತೆಳು ಗಂಜಿ ಕುಡಿದ ತಾತನನ್ನು ಗಾಳಿ ಬೆಳಕಿನ ಕೋಣೆಗೆ ವರ್ಗಾಯಿಸುತ್ತಿದ್ದಾಗ ಅಲ್ಲಿಂದ ಹೊರಟ ಮುದುಕ ತಾತನನ್ನು ಉದ್ದೇಶಿಸಿ 'ಅಭೀ ಸಮಯ್ ಆಯಾ ನಹಿಂ. ಮೇ ನತದೃಷ್ಟ್ ಹುಂ, ಚಲೋ' ಎಂದು ಹೇಳಿದ (ಇನ್ನೂ ಸಮಯ ಬಂದಿಲ್ಲ. ನಾನು ನತದೃಷ್ಟ, ನಡೆ) ತಾತ ಮುಗುಳ್ನಗುತ್ತಾ ಆತನಿಗೆ, 'ನಾನು ಅದೃಷ್ಟವಂತ ಕಣಯ್ಯಾ' ಎಂದು ಕೈ ಬೀಸಿ ವಿದಾಯ ಹೇಳಿದರು. ಯಾಕೆ ಅವರು ಆ ರೀತಿ ಹೇಳಿದ್ದು ಎಂದು ತಾತನನ್ನು ಕೇಳಿದೆ. ತಾತ ಏನೂ ಹೇಳದೆ, 'ಹೋಗಿ ಗಂಗೆ ನೀರನ್ನು ತಂದು ನನ್ನ ತಲೆಗೆ ಚುಮುಕಿಸು' ಎಂದರು. ಮಧ್ಯಾಹ್ನದ ಊಟ ಬೇಡವೆಂದು ಬರಿಯ ಗಂಗೆ ನೀರು ಕುಡಿದು ಮಲಗಿದರು. 'ಔಷಧಿಗಳನ್ನು ಒಂದು ದಿನ ತಿನ್ನದಿದ್ದರೆ ಏನೂ ಆಗುವುದಿಲ್ಲ' ಎಂದು ಮಗ್ಗಲು ಬದಲಿಸಿದರು. ಸಂಜೆ ಭಜನೆಯ ಸಮಯದಲ್ಲಿ ತಾತ ಹಾಗೇ ಒರಗಿ ಕುಳಿತು ಆಲಿಸಿದರು. 'ರಘುಪತಿ ರಾಘವ ರಾಜಾರಾಂ' ಎಂದು ಎಲ್ಲರೂ ಹಾಡಿದಾಗ ತಾತ ಮೆಲ್ಲನೆ ತಾಳ ತಟ್ಟಿದರು. ರಾತ್ರಿ ಭೋಜನದ ಸಮಯದಲ್ಲೂ ಅದೇ ಮೊಂಡುತನ ಮಾಡುತ್ತಾ, 'ಬರೀ ಗಂಗಾಜಲ ಸಾಕು ಬಿಬಿಎಂ' ಎಂದು ಗೋಡೆಗೆ ಮುಖಮಾಡಿ ಮಲಗಿದರು. ನನಗೇಕೋ ದಿಗಿಲಾಯಿತು. ರಮೇಶ್ ಅಂಕಲ್‌ಗೆ ಫೋನ್ ಮಾಡಿ ಕೊಟ್ಟೆ. ತಾತ ಮಾತನಾಡಲೊಲ್ಲೆ ಎಂದರು. ವಿಶ್ವನಾಥ ದೇವರ ವಿಭೂತಿ ತಂದು ಹಚ್ಚಿದೆ. ಗಂಜಿ ಕುಡಿಯದೆ ಮುಚ್ಚಿದ ಬಾಯನ್ನು ತೆಗೆಯದೆ ಮಲಗಿದರು. ರಾತ್ರಿ ಹನ್ನೊಂದಕ್ಕೆ ವಿಶ್ವನಾಥ ಮಂದಿರದ ಆರತಿಯ ಘಂಟಾನಾದ ಕೇಳಿಬರುತ್ತಿತ್ತು. ರಾತ್ರಿ ಇಡೀ ತಾತ ಏನೇನೋ ಕನವರಿಸುತ್ತಲೇ ಇದ್ದರು. ರಘು ಸರ್ ವಿದೇಶದಿಂದ ಫೋನ್ ಮಾಡಿದರೂ ತಾತ ಮಾತಾಡಲಿಲ್ಲ. ಆಗೊಮ್ಮೆ ಈಗೊಮ್ಮೆ ನಿತ್ರಾಣದಲ್ಲಿ ಏನೋ ಗೊಣಗುತ್ತಿದ್ದರು. ಡಾಕ್ಟರನ್ನು ಕರೆಸಬೇಕೆಂದು ಮೇಲ್ವಿಚಾರಕರನ್ನು ಕೋರಿಕೊಂಡೆ. ಅದಕ್ಕವರು, 'ವೈದ್ಯರೂ ನಾಳೆಯೇ ಬರುವುದು. ಗಂಗಾಜಲ ಕುಡಿಯುತ್ತಿದ್ದಾರಲ್ಲಾ ಪರವಾಗಿಲ್ಲ ಬಿಡಿ' ಎಂದರು.

ಮರುದಿನ ವೈದ್ಯರು ಬಂದಾಗ ತಾತ ಕಣ್ಣು ಬಿಡಲಿಲ್ಲ. ಕೆನ್ನೆ ತಟ್ಟಿ ಬಿ.ಪಿ. ನೋಡಿದರು. 'ಕಡಿಮೆ ಇದೆ. ಉಪ್ಪು ಸಕ್ಕರೆ ಮಿಶ್ರಿತ ನೀರು ಕೊಡಿ' ಎಂದು ಹೊರಟರು. 'ಡ್ರಿಪ್ಪು, ಇಂಜೆಕ್ಷನ್, ಏನೂ ಬೇಡವೇ ಡಾಕ್ಟ್ರೇ?' ಎಂದು ಕೇಳಿದಾಗ ಮುಗುಳ್ನಕ್ಕರು. 'ಅದರ ಅವಶ್ಯಕತೆ ಇಲ್ಲವೆನಿಸುತ್ತೆ ಮ್ಯಾನೇಜರ್‌ನ ಕೇಳಿ. ನೀವೇ ಸಂಬಂಧಿಕರಲ್ಲವೇ? ಇನ್ನು ಅವರ ಜವಾಬ್ದಾರಿ ನಿಮ್ಮದೇ. ಅಗತ್ಯವಿದ್ದರೆ ಆಸ್ಪತ್ರೆಗೆ ಕರೆದುಕೊಂಡು ಹೋಗಬಹುದು. ನಿಮ್ಮಿಷ್ಟ' ಎಂದುಬಿಟ್ಟರು. ಮ್ಯಾನೇಜರ್ ಬಳಿ ಓಡಿದೆ. ಅವರು 'ನಿಮ್ಮ ತಾತನೇ ಖುದ್ದಾಗಿ ಸಹಿ ಹಾಕಿ ಇಲ್ಲಿಗೆ ನೋಂದಾಯಿಸಿಕೊಂಡಿದ್ದಾರೆ. ಇದು ಅವರ ಸ್ವಇಚ್ಛೆ. ಅವರು ಕಾಶಿಯಲ್ಲೇ ಪ್ರಾಣ ಬಿಡಬೇಕೆಂದು ಬಂದಿದ್ದಾರೆ. ಅದಕ್ಕೊಂದುಸ್ಥಳಕಲ್ಪಿಸಿಕೊಟ್ಟದ್ದೇವೆ.ಇಲ್ಲಿಬಂದವರೆಲ್ಲಾ ಅದೇ ಆಸೆಯಲ್ಲೇ ಬರುತ್ತಾರೆ. ಸಾವು ಕರೆದಾಗ ಬರುತ್ತದೆ ಎಂಬ ಭ್ರಮೆಯಲ್ಲಿ ಬರುತ್ತಾರೆ. ಇಲ್ಲಿ ಹದಿನೈದು ದಿನ ಅದರ ನಿರೀಕ್ಷೆಯಲ್ಲಿ ಕಾಯುತ್ತಾರೆ. ಬಾರದಿದ್ದರೆ, ನಿನ್ನೆ ಹೊರಟ ಮುದುಕನಂತೆ, ಬಿಟ್ಟು ಹೋಗಬೇಕು. ನಿಮ್ಮ